ಪರ್ಸನಲ್ ಲೋನ್

ಮರುಪಾವತಿ

ಪ್ರಶ್ನೆ: "ನಾನು ನನ್ನ EMI ದಿನಾಂಕವನ್ನು ಬದಲಾಯಿಸಬಹುದೇ?"

ಉ: "ನೀವು Navi Appನ ಮುಖಪುಟದಲ್ಲಿ EMI ಕ್ಯಾಲೆಂಡರ್ ಆಯ್ಕೆಯಲ್ಲಿ ನಿಮ್ಮ EMI ದಿನಾಂಕವನ್ನು ವೀಕ್ಷಿಸಬಹುದು. ಸದ್ಯಕ್ಕೆ, EMI ದಿನಾಂಕವನ್ನು ಬದಲಾಯಿಸಲು ಯಾವುದೇ ಆಯ್ಕೆಗಳಿಲ್ಲ."

ಪ್ರಶ್ನೆ: "ಪಾವತಿ ಆಯ್ಕೆ ಮತ್ತು ವೇಳಾಪಟ್ಟಿಯನ್ನು ನಾನು ಎಲ್ಲಿ ನೋಡಬಹುದು?",

ಉ: "ನಿಮ್ಮ EMI ಪಾವತಿಗಳನ್ನು ನೀವು ನೋಂದಾಯಿಸಿದ ಇ-ಮ್ಯಾಂಡೇಟ್ ಮೂಲಕ ಪ್ರಕ್ರಿಯೆಗೊಳಿಸಲಾಗುತ್ತದೆ. ನೀವು ಹೋಮ್ ಸ್ಕ್ರೀನ್‌ನಲ್ಲಿರುವ Pay Now ಬಟನ್ ಮೂಲಕವೂ ಪಾವತಿಸಬಹುದು. ಮತ್ತು, Navi Appನ ಮೆನು ವಿಭಾಗದಲ್ಲಿ ಆಯ್ಕೆಗಳನ್ನು ನೋಡುವ ಮೂಲಕ ನಿಮ್ಮ EMI ಮರುಪಾವತಿ ವೇಳಾಪಟ್ಟಿಯನ್ನು ನೀವು ವೀಕ್ಷಿಸಬಹುದು.

ಪ್ರಶ್ನೆ: "ತಡವಾದ ಪಾವತಿಗಳ ಮೇಲೆ ದಂಡದ ಬಡ್ಡಿ ಇದೆಯೇ?",

ಉ: "ಮರುಪಾವತಿ ತಡವಾದ ಸಂದರ್ಭದಲ್ಲಿ, ನಿಮ್ಮ ಬಾಕಿ ಮೊತ್ತಕ್ಕೆ ವಿಳಂಬ ಶುಲ್ಕವನ್ನು ಅನ್ವಯಿಸಲಾಗುತ್ತದೆ. ನಾವು ದಂಡದ ಬಡ್ಡಿಯನ್ನು ವಿಧಿಸುವುದಿಲ್ಲ."

ಪ್ರಶ್ನೆ: "ನಾನು ಭಾಗಶಃ ಮಾಸಿಕ ಕಂತು (EMI) ಪಾವತಿ ಮಾಡಬಹುದೇ?",

ಉ: "ಹೌದು. ನೀವು ಕಸ್ಟಮ್ ಪಾವತಿ ಆಯ್ಕೆಯನ್ನು ಆಯ್ಕೆ ಮಾಡಬಹುದು ಮತ್ತು ಭಾಗಶಃ ಮಾಸಿಕ ಕಂತು (EMI) ಪಾವತಿ ಮಾಡಬಹುದು."

ಪ್ರಶ್ನೆ: "ನಾನು ತಪ್ಪಾಗಿ ಎರಡು ಬಾರಿ ಪಾವತಿಸಿದ್ದೇನೆ. ಈಗ ಏನಾಗುತ್ತದೆ?",

ಉ: "ನಾವು 48 ಗಂಟೆಗಳ ಒಳಗೆ IMPS ಮೂಲಕ ನಿಮ್ಮ ಬ್ಯಾಂಕ್ ಖಾತೆಗೆ ಹೆಚ್ಚುವರಿ ಪಾವತಿಯನ್ನು ಮರುಪಾವತಿ ಮಾಡುತ್ತೇವೆ"

ಪ್ರಶ್ನೆ: "ನನ್ನ NACH ವಿಫಲವಾಗಿದೆ. ನಾನು ಈಗ ಹೇಗೆ ಪಾವತಿಸಬಹುದು?",
ಉ: "ನೀವು Navi App ನಲ್ಲಿ ¥" Pay now (ಈಗ ಪಾವತಿಸಿ)¥" ಬಟನ್ ಮೂಲಕ ಪಾವತಿಸಬಹುದು. ದಯವಿಟ್ಟು Navi App ನಲ್ಲಿ ನಿಮ್ಮ ಹೋಮ್ ಸ್ಕ್ರೀನ್‌ನ್ನು ಪರಿಶೀಲಿಸಿ"

ಪ್ರಶ್ನೆ: "ನನ್ನ NACH ಅನ್ನು ಡೆಬಿಟ್ ಮಾಡಲಾಗಿದೆ ಆದರೆ ಅಪ್ಲಿಕೇಶನ್‌ನಲ್ಲಿ ಪಾವತಿಯನ್ನು ಅಪ್‌ಡೇಟ್ ಮಾಡಲಾಗಿಲ್ಲ?",
ಉ: "Appನಲ್ಲಿ ಪಾವತಿ ಸ್ಥಿತಿಯನ್ನು ಅಪ್‌ಡೇಟ್ ಮಾಡಲು ಕೆಲವೊಮ್ಮೆ 48 ಗಂಟೆಗಳವರೆಗೆ ತೆಗೆದುಕೊಳ್ಳಬಹುದು. ಇನ್ನಷ್ಟು ವಿಳಂಬವಾದರೆ, ದಯವಿಟ್ಟು help@navi.com ಅನ್ನು ಸಂಪರ್ಕಿಸಿ"

ಪ್ರಶ್ನೆ: "EMI ದಿನಾಂಕವು ಭಾನುವಾರ ಅಥವಾ ಬ್ಯಾಂಕ್ ರಜೆಯಾಗಿದ್ದರೆ ಏನು ಮಾಡುವುದು?",
ಉ: "EMI ದಿನಾಂಕವು ಬ್ಯಾಂಕ್ ರಜೆಯ ದಿನವಾಗಿದ್ದರೆ, ಮುಂದಿನ ಕೆಲಸದ ದಿನದಂದು ಸ್ವಯಂ ಡೆಬಿಟ್ ಅನ್ನು ಕಾರ್ಯಗತಗೊಳಿಸಲಾಗುತ್ತದೆ"

ಪ್ರಶ್ನೆ: "ನನ್ನ EMI ಅನ್ನು ಸಮಯಕ್ಕೆ ಪಾವತಿಸಲು ಸಾಧ್ಯವಾಗದಿದ್ದರೆ ಏನಾಗುತ್ತದೆ?",
ಉ: "ನಿಗದಿ ದಿನಾಂಕದೊಳಗೆ EMI ಪಾವತಿಸದಿದ್ದಲ್ಲಿ, ವಿಳಂಬ ಶುಲ್ಕಗಳು ಮತ್ತು ಬೌನ್ಸ್ ಶುಲ್ಕಗಳು ಅನ್ವಯಿಸಬಹುದು. ಉತ್ತಮ ಕ್ರೆಡಿಟ್ ಸ್ಕೋರ್ ಅನ್ನು ನಿರ್ವಹಿಸಲು ನಿಮ್ಮ ಎಲ್ಲಾ EMI ಗಳನ್ನು ಸಮಯಕ್ಕೆ ಪಾವತಿಸಲು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ."

ಪ್ರಶ್ನೆ: "ಪಾವತಿ ಮಾಡುವ ಆಯ್ಕೆಯನ್ನು ನಿಷ್ಕ್ರಿಯಗೊಳಿಸಲಾಗಿದೆ.",
ಉ: "Appನ ಮೂಲಕ ಪಾವತಿಸುವ ಆಯ್ಕೆಯನ್ನು ನಿಮ್ಮ EMI ಬಾಕಿ ಪಾವತಿಸುವ ದಿನಾಂಕದ ಮುಂಚಿತವಾಗಿ ಮತ್ತು ನಂತರದಲ್ಲಿ

ಸಕ್ರಿಯಗೊಳಿಸಲಾಗಿದೆ, ಕೆಲವು ದಿನಗಳನ್ನು ಹೊರತುಪಡಿಸಿ. App ಮತ್ತು ಇ-ಮ್ಯಾಂಡೇಟ್ ಎರಡರ ಮೂಲಕ ಡಬಲ್ ಮರುಪಾವತಿಯನ್ನು ತಪ್ಪಿಸಲು ಬಟನ್ ಅನ್ನು ನಿಷ್ಕ್ರಿಯಗೊಳಿಸಲಾಗಿದೆ."

ಸ್ವಯಂ ಡೆಬಿಟ್

ಪ್ರಶ್ನೆ: "ನನ್ನ ಬ್ಯಾಂಕ್ ವಿವರಗಳು ಸುರಕ್ಷಿತವಾಗಿದೆಯೇ?",

ಉ: "ಹೌದು, ನಿಮ್ಮ ಬ್ಯಾಂಕ್ ವಿವರಗಳು ನಮ್ಮೊಂದಿಗೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ. ನಿಮ್ಮ ಡೇಟಾವನ್ನು ರಕ್ಷಿಸಲು ನಾವು ಲಭ್ಯವಿರುವ ಅತ್ಯುತ್ತಮ ಭದ್ರತಾ ವ್ಯವಸ್ಥೆಯನ್ನು ಬಳಸುತ್ತೇವೆ."

ಪ್ರಶ್ನೆ: "ನನ್ನ ಮರುಪಾವತಿ ವೇಳಾಪಟ್ಟಿ ಏನು?",

ಉ: "Navi Appನ ಮೆನು ವಿಭಾಗದಲ್ಲಿ ಆಯ್ಕೆಯನ್ನು ಹುಡುಕುವ ಮೂಲಕ ನಿಮ್ಮ EMI ಮರುಪಾವತಿ ವೇಳಾಪಟ್ಟಿಯನ್ನು ನೀವು ವೀಕ್ಷಿಸಬಹುದು"

ಪ್ರಶ್ನೆ: "ಆಫರ್ ವಿವರಗಳು ಯಾವುವು - ಒಟ್ಟು ಎಷ್ಟು ಬಡ್ಡಿಯನ್ನು ವಿಧಿಸಲಾಗುತ್ತಿದೆ",

ಉ: "ಆಯಾ ಮೊತ್ತವನ್ನು ಪರಿಶೀಲಿಸಲು ನೀವು EMI ವೇಳಾಪಟ್ಟಿ ಮತ್ತು ಲೋನ್ ಸ್ಟೇಟ್‌ಮೆಂಟ್‌ನ್ನು ಪರಿಶೀಲಿಸಬಹುದು. ದಯವಿಟ್ಟು help@navi.com ಗೆ ನಮಗೆ ಇ-ಮೇಲ್ ಮಾಡಿ ಮತ್ತು ನಾವು ವಿವರಗಳೊಂದಿಗೆ ನಿಮಗೆ ಸಹಾಯ ಮಾಡುತ್ತೇವೆ"

ಪ್ರಶ್ನೆ: "ನಾನು ನನ್ನ ಲೋನ್‌ನನ್ನು ಯಾವಾಗ ಬೇಕಾದರೂ ಮುಚ್ಚಬಹುದೇ?",

ಉ: "ಹೌದು. ನೀವು ಯಾವಾಗ ಬೇಕಾದರೂ ಸಾಲವನ್ನು ಫೋರ್‌ಕ್ಲೋಸ್ ಮಾಡಬಹುದು."

ವಿವಿಧ

E: corporate_finserv@navi.com
T: +91 8951904682
www.navifinserv.com
CIN: U65923KA2012PTC062537

Navi Finserv Private Limited
Formerly known as Chaitanya Rural Intermediation Development Services Pvt Ltd
Ground Floor, Salarpuria Business Center, No 93, 4th B cross Road, 5th A block, Koramangala Industrial Layout, Bangalore -560095

ಪ್ರಶ್ನೆ: "ನಾನು ನನ್ನ ಮೊಬೈಲ್ ಸಂಖ್ಯೆ ಮತ್ತು/ಅಥವಾ ಇಮೇಲ್ ಐಡಿಯನ್ನು ಬದಲಾಯಿಸಬಹುದೇ?",
ಉ: "ದಯವಿಟ್ಟು help@navi.com ಗೆ ನಮಗೆ ಬರೆಯಿರಿ"

ಪ್ರಶ್ನೆ: "Naviಯ ಗ್ರಾಹಕ ಬೆಂಬಲವನ್ನು ನಾನು ಹೇಗೆ ತಲುಪಬಹುದು?",
ಉ: "ದಯವಿಟ್ಟು help@navi.com ಗೆ ನಮಗೆ ಬರೆಯಿರಿ"

ಪ್ರಶ್ನೆ: "ನನ್ನ ಇರುವ ಲೋನ್‌ನ ಮೇಲೆ ನಾನು ಟಾಪ್-ಅಪ್ ಲೋನ್‌ನನ್ನು ಪಡೆಯಬಹುದೇ?",

ಉ: "ಹೌದು, ಪ್ರಸ್ತುತ ನಾವು ಅರ್ಹ ಗ್ರಾಹಕರಿಗೆ ಟಾಪ್-ಅಪ್ ಲೋನ್‌ಗಳನ್ನು ಅನುಮತಿಸುತ್ತೇವೆ. ನಮ್ಮ ಆಂತರಿಕ ನೀತಿ ಮತ್ತು ಮಾರ್ಗಸೂಚಿಗಳ ಆಧಾರದ ಮೇಲೆ ಅರ್ಹತೆಯನ್ನು ನಿರ್ಧರಿಸಲಾಗುತ್ತದೆ. ಟಾಪ್-ಅಪ್ ಲೋನ್‌ಗಾಗಿ ನಿಮ್ಮ ಅರ್ಹತೆಯನ್ನು Navi Finserv Private Limited ರಿಂದ Navi Appನಲ್ಲಿ ತಿಳಿಸಲಾಗುತ್ತದೆ ."

ಪ್ರಶ್ನೆ: "ನನ್ನ ಬ್ಯಾಂಕ್ ವಿವರಗಳು ಸುರಕ್ಷಿತವಾಗಿದೆಯೇ?",
ಉ: "ಹೌದು, ನಿಮ್ಮ ಬ್ಯಾಂಕ್ ವಿವರಗಳು ನಮ್ಮೊಂದಿಗೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ. ನಿಮ್ಮ ಡೇಟಾವನ್ನು ರಕ್ಷಿಸಲು ನಾವು ಲಭ್ಯವಿರುವ ಅತ್ಯುತ್ತಮ ಭದ್ರತಾ ವ್ಯವಸ್ಥೆಯನ್ನು ಬಳಸುತ್ತೇವೆ."

ಸಾಮಾನ್ಯ

ಪ್ರಶ್ನೆ: "NAVI ಎಂದರೇನು?",
A: "Navi ಎಂಬುದು ಹೊಸ ಯುಗದ ಡಿಜಿಟಲ್ ಪ್ಲಾಟ್‌ಫಾರ್ಮ್ ಆಗಿದ್ದು, ಹಣಕಾಸು ಸೇವೆಗಳನ್ನು ಸರಳ, ಸುಲಭವಾಗಿ ಮತ್ತು ಕೈಗೆಟುಕುವಂತೆ ಮಾಡುವ

ಗುರಿ ಹೊಂದಿದೆ. ತ್ವರಿತ, ಕಾಗದರಹಿತ ಪರ್ಸನಲ್ ಲೋನ್‌ಗಳನ್ನು ಪಡೆಯಲು ನೀವು Navi Appನ್ನು ಬಳಸಬಹುದು."

ಪ್ರಶ್ನೆ: "Navi ಒಂದು NBFCಯೇ?",
ಉ: "Navi App Navi Technologies Private Limited ಒಡೆತನದ ಡಿಜಿಟಲ್ ಪ್ಲಾಟ್‌ಫಾರ್ಮ್ ಆಗಿದೆ. Navi Appನಲ್ಲಿ, ನೋಂದಾಯಿತ NBFC ಆಗಿರುವ Navi Finserv Private Limited ನಿಂದ ಸಾಲಗಳನ್ನು ನೀಡಲಾಗುತ್ತದೆ."

ಬ್ಯಾಂಕ್ ಸ್ಟೇಟ್‌ಮೆಂಟ್

ಪ್ರಶ್ನೆ: "ನನ್ನ ನೆಟ್‌ಬ್ಯಾಂಕಿಂಗ್ ಲಾಗಿನ್ ಡೇಟಾ ಸುರಕ್ಷಿತವಾಗಿದೆಯೇ?",
ಉ: "ನಿಮ್ಮ ನೆಟ್‌ಬ್ಯಾಂಕಿಂಗ್ ಲಾಗಿನ್ ಮತ್ತು ಪಾಸ್‌ವರ್ಡ್ ಸಂಪೂರ್ಣವಾಗಿ ಸುರಕ್ಷಿತ ಮತ್ತು ಭದ್ರವಾಗಿದೆ. ನಾವು ಈ ಡೇಟಾವನ್ನು ನಮ್ಮ ಸಿಸ್ಟಂನಲ್ಲಿ ಸಂಗ್ರಹಿಸುವುದಿಲ್ಲ. ಇದನ್ನು ನೈಜ ಸಮಯದಲ್ಲಿ ದೃಢೀಕರಣಕ್ಕಾಗಿ ಮಾತ್ರ ಬಳಸಲಾಗುತ್ತದೆ."

ಪ್ರಶ್ನೆ: "ನನ್ನ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ನು ನಾನು ಏಕೆ ಹಂಚಿಕೊಳ್ಳಬೇಕು?",
ಉ: "ನಿಮ್ಮ ಬ್ಯಾಂಕ್ ಸ್ಟೇಟ್‌ಮೆಂಟ್ ಮಾಹಿತಿಯು ನಿಮಗಾಗಿ ಉತ್ತಮ ಆಫರ್ ಅನ್ನು ರಚಿಸಲು ನಮಗೆ ಸಹಾಯ ಮಾಡುತ್ತದೆ. ನೀವು ಅದೇ ಖಾತೆಯಡಿಯಲ್ಲಿ ಸಾಲ ಪಡೆಯಲು ಬಯಸಿದರೆ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಪರಿಶೀಲಿಸಲು ಇದು ನಮಗೆ ಸಹಾಯ ಮಾಡುತ್ತದೆ."

ಪ್ರಶ್ನೆ: "ನನ್ನ ಬ್ಯಾಂಕ್‌ಗೆ ನೆಟ್‌ಬ್ಯಾಂಕಿಂಗ್ ಲಾಗಿನ್ ಆಯ್ಕೆಯು ದೊರಕುತ್ತಿಲ್ಲ.
ಉ: "ಪ್ರಸ್ತುತ ನಾವು ನೆಟ್‌ಬ್ಯಾಂಕಿಂಗ್ ಲಾಗಿನ್ ಆಯ್ಕೆಯೊಂದಿಗೆ > 20 ಬ್ಯಾಂಕ್‌ಗಳನ್ನು ಬೆಂಬಲಿಸುತ್ತೇವೆ. ನೀವು ಈ ಆಯ್ಕೆಯನ್ನು ನೋಡದಿದ್ದರೆ, ನೀವು ಆಯ್ಕೆ ಮಾಡಿದ ಬ್ಯಾಂಕ್ ಇನ್ನೂ ಈ ಬೆಂಬಲವನ್ನು ಹೊಂದಿಲ್ಲ

E: corporate_finserv@navi.com
T: +91 8951904682
www.navifinserv.com
CIN: U65923KA2012PTC062537

Navi Finserv Private Limited
Formerly known as Chaitanya Rural Intermediation Development Services Pvt Ltd
Ground Floor, Salarpuria Business Center, No 93, 4th B cross Road, 5th A block, Koramangala Industrial Layout, Bangalore -560095

ಎಂದರ್ಥ. ನೀವು ಬೇರೆ ಬ್ಯಾಂಕ್ ಅನ್ನು ಆಯ್ಕೆ ಮಾಡಿ ನೆಟ್‌ಬ್ಯಾಂಕಿಂಗ್ ಲಾಗಿನ್‌ನನ್ನು ಬಳಸಲು ಪ್ರಯತ್ನಿಸಬಹುದು ."

ಪ್ರಶ್ನೆ: "PDF ಅಪ್‌ಲೋಡ್ ಆಯ್ಕೆಗಾಗಿ, ಯಾವ ಫೈಲ್ ಫಾರ್ಮ್ಯಾಟ್‌ಗಳನ್ನು ಬೆಂಬಲಿಸಲಾಗುತ್ತದೆ?",

ಉ: "ನಿಮ್ಮ ಬ್ಯಾಂಕ್ ಕಳುಹಿಸಿದ ಇ-ಸ್ಟೇಟ್‌ಮೆಂಟ್‌ಗಳನ್ನು ಮಾತ್ರ ಈ ಆಯ್ಕೆಯೊಂದಿಗೆ ಬೆಂಬಲಿಸಲಾಗುತ್ತದೆ. ಬ್ಯಾಂಕ್ ಸ್ಟೇಟ್‌ಮೆಂಟ್‌ಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಬೆಂಬಲಿಸುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ."

ಪ್ರಶ್ನೆ: "PDF ಅಪ್‌ಲೋಡ್ ಆಯ್ಕೆಯಲ್ಲಿನ ಹೇಳಿಕೆಗಳ ದಿನಾಂಕ ಶ್ರೇಣಿ ಏನಾಗಿರಬೇಕು?",

ಉ: "ನೀವು ಇತ್ತೀಚಿನ 6 ತಿಂಗಳುಗಳ ಬ್ಯಾಂಕ್ ಸ್ಟೇಟ್‌ಮೆಂಟ್‌ಅನ್ನು ಸಲ್ಲಿಸುವ ಅಗತ್ಯವಿದೆ. ದಯವಿಟ್ಟು ದಿನಾಂಕದ ಶ್ರೇಣಿ ಸರಿಯಿದೆಯೆ ಎಂದು ಖಚಿತಪಡಿಸಿಕೊಳ್ಳಿ."

ಪ್ರಶ್ನೆ: "ನನ್ನ ನೆಟ್ ಬ್ಯಾಂಕಿಂಗ್ ಲಾಗಿನ್ ಆಯ್ಕೆಯನ್ನು ಏಕೆ ನಿಷ್ಕ್ರಿಯಗೊಳಿಸಲಾಗಿದೆ?",

ಉ: "ನೀವು ನೆಟ್‌ಬ್ಯಾಂಕಿಂಗ್ ಲಾಗಿನ್ ಆಯ್ಕೆಯಲ್ಲಿ 2 ವಿಫಲ ಲಾಗಿನ್ ಪ್ರಯತ್ನಗಳನ್ನು ಮಾಡಿದರೆ, ಈ ಆಯ್ಕೆಯನ್ನು ನಾವು 24 ಗಂಟೆಗಳ ಕಾಲ ನಿಷ್ಕ್ರಿಯಗೊಳಿಸುತ್ತೇವೆ. ಇದನ್ನು ಏಕೆ ಮಾಡಲಾಗುತ್ತದೆ ಎಂದರೆ 3 ವಿಫಲ ಪ್ರಯತ್ನವಾದಲ್ಲಿ, ನಿಮ್ಮ ಬ್ಯಾಂಕ್ ನಿಮ್ಮ ಲಾಗಿನ್ ರುಜುವಾತುಗಳನ್ನು ಬ್ಲಾಕ್ ಮಾಡುತ್ತದೆ. ನಿಮಗೆ ಮತ್ತೆ 24 ಗಂಟೆಗಳ ನಂತರವೇ ನೆಟ್‌ಬ್ಯಾಂಕಿಂಗ್ ಲಾಗಿನ್ ಮಾಡಲು ಅನುಮತಿ ಸಿಗುತ್ತದೆ. ಈ ಮಧ್ಯೆ, ನಿಮ್ಮ ಬಳಿ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳಿದ್ದರೆ ನೀವು PDF ಅಪ್‌ಲೋಡ್ ಆಯ್ಕೆಯನ್ನು ಸಹ ಪ್ರಯತ್ನಿಸಬಹುದು.

## ಹೋಮ್ ಲೋನ್

ಪ್ರಕ್ರಿಯೆ

ಪ್ರಶ್ನೆ: "Navi ಹೋಮ್ ಲೋನ್‌ಗಳಿಗೆ ನಾನು ಹೇಗೆ ಅರ್ಜಿ ಸಲ್ಲಿಸಬಹುದು?",
ಉ: "Navi ಹೋಮ್ ಲೋನ್‌ಗಳಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಹೋಮ್ ಪೇಜ್‌ನಲ್ಲಿರುವ ಹೋಮ್ ಲೋನ್ಸ್ ಬಟನ್ ಕ್ಲಿಕ್ ಮಾಡುವ ಮೂಲಕ ಮಾಡಲಾಗುತ್ತದೆ."

ಪ್ರಶ್ನೆ: "ಹೋಮ್ ಲೋನ್‌ನನ್ನು ಒದಗಿಸಲು Navi ಯಾವ ರೀತಿಯ ಆಸ್ತಿಗಳನ್ನು ಪರಿಗಣಿಸುತ್ತದೆ?",
ಉ: "Naviಯು ನಿರ್ಮಾಣ ಹಂತದಲ್ಲಿರುವ ಮನೆ, ವಾಸವಿರಲು ಸಿದ್ಧವಾಗಿರುವ ಮನೆ, ಸ್ವಯಂ-ನಿರ್ಮಿತ ಮನೆ ಮತ್ತು ಮನೆಯನ್ನು ಖರೀದಿಸುವ ಉದ್ದೇಶಗಳಿಗಾಗಿ ಹೋಮ್ ಲೊನ್‌ನನ್ನು ಒದಗಿಸುತ್ತದೆ."

ಪ್ರಶ್ನೆ: "Naviಯಿಂದ ತಾತ್ವಿಕ ಆಪರ್ ಅನ್ನು ಪಡೆಯಲು ನಾನು ಯಾವ ಮಾಹಿತಿಯನ್ನು ಒದಗಿಸಬೇಕು?",
ಉ: "ನೀವು ಆಸಕ್ತಿ ಹೊಂದಿರುವ ಆಸ್ತಿಯ(ನಿರ್ಧರಿಸಿದ್ದರೆ) ಕುರಿತು ಕೆಲವು ಮೂಲಭೂತ ಮಾಹಿತಿಯೊಂದಿಗೆ ನಿಮ್ಮ ಮತ್ತು ಸಹ-ಅರ್ಜಿದಾರರ PAN (ಅನ್ವಯಿಸಿದರೆ) ಒದಗಿಸಬೇಕಾಗುತ್ತದೆ."

ಪ್ರಶ್ನೆ: "Naviಯಿಂದ ಹೋಮ್ ಲೋನ್ ಆಫರ್ ಪಡೆದ ನಂತರ ನಾನು ಏನು ಮಾಡಬೇಕು?",
ಉ: "ಆಫರ್ ಪಡೆದ ನಂತರ, ನೀವು homeloans@navi.com ಗೆ ಅಗತ್ಯ ದಾಖಲೆಗಳನ್ನು ಹಂಚಿಕೊಳ್ಳಬಹುದು ಅಥವಾ ನೀವು ನಮ್ಮನ್ನು ಸಂಪರ್ಕಿಸಬಹುದು +91 81475 44555."

ಪ್ರಶ್ನೆ: "ನಾನು ಖರೀದಿಸಲಿರುವ ಆಸ್ತಿಯನ್ನು ಇನ್ನೂ ನಿರ್ಧರಿಸಿಲ್ಲ/ಅಂತಿಮಗೊಳಿಸಿಲ್ಲ, ಹೀಗಿದ್ದಾಗ ನಾನು Navi ಹೋಮ್ ಲೋನ್‌ಗಳಿಗೆ ಅರ್ಜಿ ಸಲ್ಲಿಸಬಹುದೇ?",
ಉ: "ಹೌದು, ನಿಮ್ಮ ಹೋಮ್ ಲೋನ್ ಅವಶ್ಯಕತೆಗಳಿಗಾಗಿ, Navi ನಿಮಗೆ ಒದಗಿಸುವ ಸಾಲದ ಮೊತ್ತದ ಅಂದಾಜು ಪಡೆಯಲು ನೀವು ಅರ್ಜಿ ಸಲ್ಲಿಸಬಹುದು."

ಪ್ರಶ್ನೆ: "ಸಾಲದ ಅರ್ಜಿಗೆ ಯಾರು ಸಹ-ಅರ್ಜಿದಾರರಾಗಬಹುದು?",
ಉ: "ನಿಮ್ಮ ಸಂಗಾತಿ, ಪೋಷಕರು, ಮಕ್ಕಳು, ಸಹೋದರ ಅಥವಾ ಸಹೋದರಿಯರು ಸಾಲದ ಅರ್ಜಿಗೆ ಸಹ-ಅರ್ಜಿದಾರರಾಗಬಹುದು. ಸಾಲದ ಸಹ-ಅರ್ಜಿದಾರರು ಹೋಮ್ ಲೋನ್‌ಗಾಗಿ EMI ಗಳನ್ನು ಮರುಪಾವತಿ ಮಾಡುವ ಜವಾಬ್ದಾರಿಯನ್ನು ಜಂಟಿಯಾಗಿ ಹಂಚಿಕೊಳ್ಳುವ ವ್ಯಕ್ತಿಯಾಗಿರುತ್ತಾರೆ."

ಅರ್ಹತೆ

ಪ್ರಶ್ನೆ: "Navi ಯಾವ ನಗರಗಳಲ್ಲಿ ಗೃಹ ಸಾಲಗಳನ್ನು ಒದಗಿಸುತ್ತದೆ?",
ಉ: "Navi ಕರ್ನಾಟಕ, ತಮಿಳುನಾಡು ಮತ್ತು ತೆಲಂಗಾಣ ಈ ರಾಜ್ಯಗಳ ಕೆಲವು ಆಯ್ದ ನಗರಗಳಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ನಾವು ಪ್ರಸ್ತುತ ಬೆಂಗಳೂರು, ದಾವಣಗೆರೆ, ಗುಲ್ಬರ್ಗ, ಹುಬ್ಬಳ್ಳಿ, ಮೈಸೂರು ಮತ್ತು ಹೈದರಾಬಾದ್ ಮತ್ತು ಚೆನ್ನೈ ನಗರಗಳಲ್ಲಿ ನಮ್ಮ ಸೇವೆಯನ್ನು ಒದಗಿಸುತ್ತೇವೆ."

ಪ್ರಶ್ನೆ: "Navi ಹೋಮ್ ಲೋನ್‌ಗಳನ್ನು ಪಡೆಯಲು ಕನಿಷ್ಠ ಅರ್ಹತೆ ಏನು?",
ಉ: " Navi ಹೋಮ್ ಲೋನ್‌ಗಳಿಗೆ ಅರ್ಜಿ ಸಲ್ಲಿಸಲು ನೀವು ಕನಿಷ್ಟ 21 ವರ್ಷ ವಯಸ್ಸಿನವರಾಗಿರಬೇಕು ಮತ್ತು ಸಂಬಳದ ಅಥವಾ ಸ್ವಯಂ ಉದ್ಯೋಗಿ ಗ್ರಾಹಕರಾಗಿರಬೇಕು."

E: corporate_finserv@navi.com
T: +91 8951904682
www.navifinserv.com
CIN: U65923KA2012PTC062537

Navi Finserv Private Limited
Formerly known as Chaitanya Rural Intermediation Development Services Pvt Ltd
Ground Floor, Salarpuria Business Center, No 93, 4th B cross Road, 5th A block, Koramangala Industrial Layout, Bangalore -560095

ಪ್ರಶ್ನೆ: "ನಾನು ಸ್ವಯಂ ಉದ್ಯೋಗಿ, ನಾನು ಹೋಮ್ ಲೋನ್ ಪಡೆಯಬಹುದೇ?",
ಉ: "ಹೌದು, Navi ಹೋಮ್ ಲೋನ್‌ಗಳು ಸ್ವಯಂ ಉದ್ಯೋಗಿ ಗ್ರಾಹಕರಿಗೂ ಲಭ್ಯವಿದೆ."

ಆಫರ್, ಬಡ್ಡಿ ಮತ್ತು ಶುಲ್ಕ

ಪ್ರಶ್ನೆ: "ನಾನು ನನ್ನ ಆಸ್ತಿಗೆ ಎಷ್ಟು ಹಣವನ್ನು ಪಡೆಯಬಹುದು?",
ಉ: "Navi ನಿಮ್ಮ ಮನೆಗೆ 90% ವರೆಗೆ ಹಣವನ್ನು ಒದಗಿಸಬಹುದು, ಅಂದರೆ ನಿಮ್ಮ ಆಸ್ತಿ ಮೌಲ್ಯ ರೂ. 1 ಕೋಟಿಯಾಗಿದ್ದರೆ, ನವಿ ರೂ. 90 ಲಕ್ಷದವರೆಗೆ ಹೋಮ್ ಲೋನ್ ನೀಡಬಹುದು."

ಪ್ರಶ್ನೆ: "ನಾನು Naviಯಿಂದ ಹೋಮ್ ಲೋನ್‌ನನ್ನು ತೆಗೆದುಕೊಂಡರೆ ನಾನು ತೆರಿಗೆ ಪ್ರಯೋಜನಗಳನ್ನು ಪಡೆಯಬಹುದೇ?",
ಉ: "ಹೌದು, ಆದಾಯ ತೆರಿಗೆ ಕಾಯಿದೆಯಡಿಯಲ್ಲಿ, ನಿವಾಸಿಯೊಬ್ಬರು ಸೆಕ್ಷನ್ 24(ಬಿ) ಅಡಿಯಲ್ಲಿ ಪಾವತಿಸಿದ ಬಡ್ಡಿಗೆ ರೂ 2,00,000 ವರೆಗೆ ಮತ್ತು ಪಾವತಿಸಿದ ಅಸಲಿಗೆ ರೂ 1,50,000 ವರೆಗೆ ತೆರಿಗೆ ಪ್ರಯೋಜನಗಳನ್ನು ಪಡೆಯಬಹುದು."

ಪ್ರಶ್ನೆ: "Navi ಹೋಮ್ ಲೋನ್‌ಗಳಿಗೆ ಬಡ್ಡಿ ದರಗಳು ಯಾವ ರೀತಿ ಇರುತ್ತವೆ? ",
ಉ: "Navi ನಲ್ಲಿ ಬಡ್ಡಿ ದರಗಳು 6.7% ರಿಂದ ಪ್ರಾರಂಭವಾಗುತ್ತವೆ ಮತ್ತು ಪ್ರತಿ ಗ್ರಾಹಕರಿಗು ಅವರ ಪ್ರೊಫೈಲ್ ಅನ್ನು ಆಧರಿಸಿ ಅದನ್ನು ಕಸ್ಟಮೈಸ್ ಮಾಡಲಾಗುತ್ತದೆ."

ಪ್ರಶ್ನೆ: "Navi ಹೋಮ್ ಲೋನ್‌ಗಳ ಶುಲ್ಕ ಮತ್ತು ವೇಳಾಪಟ್ಟಿ ಏನು?",
A: "ಪ್ರೊಸೆಸಿಂಗ್ ಶುಲ್ಕ: ಸಾಲದ ಮೊತ್ತದ 0.5% ಹಾಗು 25,000 ರೂ ಗೆ ಸೀಮಿತವಾಗಿಡಲಾಗಿದೆ. ಡಾಕ್ಯುಮೆಂಟೇಶನ್ ಶುಲ್ಕ, ಕಾನೂನು ಶುಲ್ಕ,

ಮೌಲ್ಯಮಾಪನ ಶುಲ್ಕ: ZERO. ಇತ್ತೀಚಿನ ಶುಲ್ಕಕ್ಕಾಗಿ ಭೇಟಿ ನೀಡಿ (https://www.navifinserv.com/) "

ಇತರೆ

ಪ್ರಶ್ನೆ: "Navi ಹೋಮ್ ಲೋನ್‌ಗಳನ್ನು ಪಡೆದುಕೊಳ್ಳುವಾಗ ನಾನು ವಿಮೆಯನ್ನು ತೆಗೆದುಕೊಳ್ಳಬೇಕೇ?",
ಉ: " ಹೋಮ್ ಲೋನ್‌ಗಳಿಗಾಗಿ ನಾವು ಜೀವ ವಿಮಾ ರಕ್ಷಣೆಯನ್ನು ನೀವು ತೆಗೆದುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ, ಆದಾಗ್ಯೂ ನಾವು ಜೀವ ವಿಮೆಯನ್ನು ತೆಗೆದುಕೊಳ್ಳಲೇಬೇಕೆಂದು ನಿಮ್ಮನ್ನು ಒತ್ತಾಯಿಸುವುದಿಲ್ಲ. ಭೂಕಂಪ ಅಥವಾ ಸ್ಟ್ರಕ್ಚರಲ್ ಡ್ಯಾಮೇಜ್‌ನಂತಹ ನೈಸರ್ಗಿಕ ಘಟನೆಗಳ ವಿರುದ್ಧ ರಕ್ಷಣೆಗಾಗಿ ನಾವು ಪ್ರೊಪರ್ಟಿ ಸ್ಟ್ರಕ್ಚರಲ್ ಇನ್ಶೂರೆನ್ಸ್ ಅನ್ನು ಒದಗಿಸುತ್ತೇವೆ."

ಪ್ರಶ್ನೆ: "Pre-EMI ಎಂದರೇನು?",
A: "Pre-EMI ಎನ್ನುವುದು ಭಾಗಶಃ ಪಡೆದ ಸಾಲದ ಮೊತ್ತಕ್ಕೆ, ಮತ್ತು ನಿಜವಾದ EMI ಪ್ರಾರಂಭವಾಗುವ ಮೊದಲು, ಪಾವತಿಸಿದ ಬಡ್ಡಿಯಾಗಿದೆ. ಇದು ಮುಖ್ಯವಾಗಿ ಸ್ವಯಂ ನಿರ್ಮಾಣ ಅಥವಾ ನಿರ್ಮಾಣ ಹಂತದ ಅವಧಿಯಲ್ಲಿನ ವಿತರಣೆಗಳಲ್ಲಿ ಸಂಭವಿಸುತ್ತದೆ."

ಪ್ರಶ್ನೆ: "Navi ಬ್ಯಾಲೆನ್ಸ್ ಟ್ರಾನ್ಸ್‌ಫರ್ ಲೋನ್‌ಗಳನ್ನು ಒದಗಿಸುತ್ತದೆಯೇ?",
ಉ: "ಹೌದು, ನಾವು ಬ್ಯಾಲೆನ್ಸ್ ಟ್ರಾನ್ಸ್‌ಫರ್ ಲೋನ್‌ಗಳನ್ನು ಪ್ರಾರಂಭಿಸಿದ್ದೇವೆ."